ಮರೆತು ಹೋದ ರೆಕ್ಕೆಗಳೋ
ಸೇರಿಕೊಂಡವು ಬಂದು ನನ್ನೊಳಗನ್ನು,
ಆ ಬೆಂಕಿ ಜಾಡ ಹಿಡಿದು
ದಾರಿಯ ಕಂಡುಕೊಳ್ಳತೊಡಗಿದೆ
ನನ್ನಷ್ಟಕ್ಕೆ ನಾನು,
ಮೊದಲ ಸಾಲು ಬರೆದೆ, ಮಸುಕು
ಮಸುಕು ಸಾಲು ಬರೆದೆ, ಅರ್ಥವಿತ್ತು
ನಿರರ್ಥವಿತ್ತು ಅದರೊಳಗೆ ಜೊಳ್ಳು ಗಟ್ಟಿ ಇತ್ತು.
ಅದು ಅಪ್ಪಟ ತಲೆಹರಟೆ,
ಅದೆ ಅಪ್ಪಟ ತಿಳಿವಳಿಕೆ
ಏನೂ ತಿಳಿಯದವರಿಗೆ ಮಾತ್ರ ದಕ್ಕುವ ಮಾತು ಅದು;
ಇದ್ದಕ್ಕಿದ್ದಂತೆ ಕಂಡಿತು ಕಣ್ಣರಿಯದ ಬೆರಗು
ತೆರೆಯಿತು ಬಾನಲೋಕಗಳ ಬಾಗಿಲು,
ಗ್ರಹ ತಾರಕೆಗಳ ಸ್ಪಂದ,
ತಲ್ಲಣ ತವಕಗಳ ತೋಟ,
ನೆರಳ ಸೀಳುವ ಬೆಳಕು
ಬಾಣಗಳು ಬಾನತುಂಬ,
ಹೂವಂಥ ಬೆಂಕಿ, ಬೆಂಕಿಯಂಥ ಹೂವು,
ಗರಗರ ತಿರುಗುವ ಇರುಳು, ಹರಡಿಕೊಂಡ ವಿಶ್ವ.

ನಾನು, ಅಣುವಿನಂಥವನು,
ಚಿಕ್ಕೆಬೆಳಕನು ಕುಡಿದು ಸೊಕ್ಕಿದವನು,
ನಕ್ಷತ್ರಲೋಕದಲಿ ಕರಗಿದವನು,
ಅದರಂತೆ ಇದ್ದೆ, ನಾನು
ಆ ನಿಗೂಢದ ಪ್ರತಿಮೆ, ಆ ಕಂದರ ಕಮರಿಗಳ
ಪರಿಶುದ್ಧ ಭಾಗ ನಾನು.
ತಾರೆಗಳ ಜೊತೆಯಲ್ಲಿ ನನ್ನ ಗಾಲಿಪಯಣ.
ನನ್ನ ಹೃದಯ ಒಡೆದು ಹರಡಿದೆ
ಗಾಳಿತೇರಿನಲಿ ಸಂಚಲನ.

ಮಂತ್ರಮುಗ್ಧ ಬೆಳಕಿಗೊಂದು ಗೀತೆ
ಮರಗಳಡಿಯಲ್ಲಿ ಬೆಳಕು
ಆಕಾಶದಾಳದ ಬೆಳಕು.
ರೆಂಬೆಕೊಂಬೆಗಳ ಮೇಲೆ
ಬೆಳಕಿನ ಹಚ್ಚೆ